# ಅಸ್ಥಿಪಂಜರ

ನಾವು ಮೂವರು ಸಂಗಡಿಗ ಬಾಲಕರು ಮಲಗುತ್ತಿದ್ದ ಕೊಠಡಿಯ ಪಕ್ಕದ ಕೋಣೆಯ ಗೋಡೆಗೆ ಒಂದು ದೊಡ್ಡ ಅಸ್ಥಿಪಂಜರ ನೇತು ಹಾಕಿತ್ತು. ರಾತ್ರಿಯಲ್ಲಿ ಗಾಳಿಗೆ ಅದರ ಮೂಳೆಗಳು ಅಲುಗಿ ಖಟಖಟ ಎಂದು ಶಬ್ದ ಮಾಡುತ್ತಿದ್ದುವು. ಹಗಲಿನಲ್ಲಿ ಆ ಮೂಳೆಗಳನ್ನು ಅಲುಗಿಸುವ ಕೆಲಸ ನಮ್ಮದಾಗಿತ್ತು. ನಮ್ಮನ್ನು ಸರ್ವಪ್ರಯತ್ನದಿಂದ ಸರ್ವವಿದ್ಯಾಪಾರಂಗತರನ್ನಾಗಿ ಮಾಡಬೇಕೆಂಬ ಆಶೆ ನಮ್ಮ ಪೋಷಕರುಗಳಿಗಿತ್ತು. ಅವರುಗಳ ಅಭಿಪ್ರಾಯ ಎಷ್ಟುದೂರ ಸಫಲವಾಯಿತೆಂಬ ವಿಷಯವನ್ನು ನಮ್ಮ ಸಂಗತಿ ಪೂರ್ಣವಾಗಿ ಬಲ್ಲವರಿಗೆ ತಿಳಿಸಬೇಕಾದ ಆವಶ್ಯಕತೆಯಿಲ್ಲ. ನಮ್ಮನ್ನೇ ಅರಿಯದವರಿಗೆ ತಿಳಿಸದಿರುವುದೇ ಶ್ರೇಯಸ್ಕರ.

ಆಗಿನಿಂದ ಬಹುಕಾಲ ಕಳೆದಿದೆ. ಈ ನಡುವೆ ಆ ಕೋಣೆಯಿಂದ ಆ ಅಸ್ಥಿಪಂಜರವೂ, ನಮ್ಮ ಮಸ್ತಿಷ್ಕದಿಂದ ಅಸ್ಥಿವಿದ್ಯೆಯೂ ಎಲ್ಲಿಗೆ ಸ್ಥಾನಾಂತರಿತವಾಗಿವೆಯೆಂಬುದನ್ನು ಹುಡುಕುವುದು ಸಾಧ್ಯವಿಲ್ಲ.

ಕೆಲವು ದಿನಗಳ ಹಿಂದೆ ಒಂದು ರಾತ್ರಿ ಯಾವ ಕಾರಣದಿಂದಲೋ ಬೇರೆಲ್ಲೂ ಸ್ಥಳವಿಲ್ಲದ ಕಾರಣ ನನಗೆ ಆ ಕೊಠಡಿಯಲ್ಲೇ ಮಲಗಿಕೊಳ್ಳುವ ಪ್ರಸಂಗ ಒದಗಿತು. ಸ್ಥಳ ಬದಲಾಯಿಸುವ ಅಭ್ಯಾಸವಿಲ್ಲದ ಕಾರಣದಿಂದ ನಿದ್ರೆ ಬರಲಿಲ್ಲ. ಈ ಮಗ್ಗುಲಿಂದ ಆ ಮಗ್ಗುಲಿಗೆ ಹೊರಳುತ್ತ ಹೊರಳುತ್ತ ಇರುವಾಗ ಚರ್ಚಿನ ಗಡಿಯಾರದಲ್ಲಿ ದೊಡ್ಡ ಅಂಕಿಯ ಗಂಟೆಗಳೆಲ್ಲ ಹೊಡೆದು ಮುಗಿದುವು. ಈ ನಡುವೆ ಕೋಣೆಯ ಮೂಲೆಯೊಂದರಲ್ಲಿ ಉರಿಯುತ್ತಿದ್ದ ಎಣ್ಣೆದೀಪವೊಂದು ಸುಮಾರು ನಾಲ್ಕಾರು ನಿಮಿಷಗಳಿಂದ ಮಿಣುಗುಟ್ಟುತ್ತಿದ್ದು ಥಟ್ಟನೆ ಆರಿಹೋಯಿತು. ಕೆಲವೇ ದಿನಗಳ ಹಿಂದೆ ನಮ್ಮ ಮನೆಯಲ್ಲಿ ಒಂದೆರಡು ದುರ್ಘಟನೆಗಳು ಸಂಭವಿಸಿದ್ದವು. ಆದ್ದರಿಂದಲೇ ಈ ದೀಪ ಆರಿದ ನಂತರ ಸಾವಿನ ವಿಷಯ ನೆನಪಾಗುವುದು ಸಹಜವಾಗಿತ್ತು. ರಾತ್ರಿಯ ಈ ಎರಡನೆಯ ಝಾವದಲ್ಲಿ ಈ ದೀಪದ

ಅಂಧಕಾರ ಪಟದ ಮೇಲೆ ಜಾಜ್ವಲ್ಯಮಾನವಾಗಿ ಅರಳಿ ಹೊಳೆಯುತ್ತಿದೆ. ಇದಕ್ಕೆ ಹೆಚ್ಚು ನನ್ನಿಂದ ಹೇಳಲು ಸಾಧ್ಯವಿಲ್ಲ" ಎಂದು ನಾನಂದೆ.

"ನನ್ನ ಜೊತೆಗಾತಿಯರು ಯಾರೂ ಇರಲಿಲ್ಲ. ನಮ್ಮಣ್ಣ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ. ಅಂತಃಪುರದಲ್ಲಿ ನಾನು ಒಬ್ಬಂಟಿಗಳು. ತೋಟದ ಮರದಡಿಯಲ್ಲಿ ಒಂಟಿಯಾಗಿ ಕುಳಿತು ಯೋಚನೆ ಮಾಡುತ್ತಿದ್ದೆ. 'ಪ್ರಪಂಚವೆಲ್ಲವೂ ನನ್ನನ್ನೇ ಪ್ರೀತಿಸುತ್ತದೆ. ನಕ್ಷತ್ರಗಳೆಲ್ಲವೂ ನನ್ನನ್ನೇ ನೋಡುತ್ತಿವೆ. ವಾಯು ಛಟ್ಟನೆ ದೀರ್ಘ ವಾದ ನಿಟ್ಟುಸಿರನ್ನು ಬಿಡುತ್ತ ಪಕ್ಕದಲ್ಲಿ ಹೋಗುತ್ತಿದೆ. [illegible] ನೀಡಿಕೊಂಡು ಕುಳಿತಿರುವ ಹುಲ್ಲಿನ ಹಾಸಿಗೆಗೆ ಚೇತನಶಕ್ತಿಯಿದ್ದು ದಾದರೆ ಅದು ನನ್ನನ್ನು ಸ್ಪರ್ಶಿಸಿ ಅಚೇತನವಾಗಿಬಿಡುತ್ತಿತ್ತು. [illegible] ಎಲ್ಲ ಯೌವನ ಪುರುಷರು ಈ ತೃಣಪುಂಜದ ರೂಪದಲ್ಲಿ [illegible] ಚರಣವರ್ತಿಗಳಾಗಿ ನಿಂತಿರುವರು' ಎಂಬೀ ರೀತಿಯಾಗಿ [illegible] ಕೊಳ್ಳುತ್ತಿದ್ದೆ. ಹೃದಯದಲ್ಲಿ ಅಕಾರಣವಾಗಿ [illegible] ಯುಂಟಾಗುತ್ತಿತ್ತು.

"ಅಣ್ಣನ ಸ್ನೇಹಿತ ಶಶಿಶೇಖರನು ಮೆಡಿಕಲ್ ಕಾಲೇಜಿನಿಂದ ಪಾಸಾಗಿ ಬಂದನಂತರ ಅವನೇ ನಮ್ಮ ಮನೆಯ ಡಾಕ್ಟರನಾದನು. ಅದಕ್ಕೆ ಮುಂಚೆ ನಾನವನನ್ನು ಮರೆಯಿಂದ ಹಲ[illegible]. ಅಣ್ಣ ಮಹಾ ವಿಚಿತ್ರವ್ಯಕ್ತಿಯಾಗಿದ್ದನು. [illegible] ನೋಡುವವನೇ ಅಲ್ಲ."

"ಅವನ ಸ್ನೇಹಿತರೆಂದರೆ ಶಶಿಶೇ[illegible] ಮಾತ್ರವೇ. ಮತ್ತೆ ನಾನು ಸಂಜೆಯ [illegible] ಯಲ್ಲಿ ಮಹಾರಾಣಿಯ ಆಸನವನ್ನು [illegible] ಪೃಥ್ವಿಯ ಸಮಸ್ತ ಪುರುಷ ಜಾತಿಯೂ ಶಶಿಶೇಖರ[illegible] ಬಳಿ ನಿಲ್ಲುತ್ತಿತ್ತು. ಕೇಳುತ್ತಿರುವೆಯೇನು? [illegible] ಯೋಚಿಸುತ್ತಿರುವೆ?"

ನಾನು ನಿಟ್ಟುಸಿರು ಬಿಡುತ್ತಾ [illegible] ಚೆನ್ನಾಗಿತ್ತು ಎಂದು ಮನಸ್ಸಿಗೆ ತೋ[illegible]

ಪರದೇಶಿಗೆ ತನ್ನ ಆಸ್ತಿಯನ್ನೆಲ್ಲಾ ಕೊಟ್ಟು ಹೋಗುವನು ಎಂದು ನಿರ್ಧರಿಸಿದರು.

ಹುಡುಗನ ವಿಷಯದಲ್ಲಿ ಎಲ್ಲರಿಗೂ ಹೊಟ್ಟೇಕಿಚ್ಚು ತಲೆಹಾಕಿತು. ಅವನಿಗೆ ಹೇಗಾದರೂ ಕೆಡಕು ಮಾಡಬೇಕೆಂದು ಹಲವರು ಹೊಂಚು ಹಾಕುತ್ತಿದ್ದರು. ಆದರೆ ಮುದುಕ ಅವನನ್ನು ಎದೆಯಗೂಡಿನಂತೆ ಮುಚ್ಚಿ ಕೊಂಡು ಕಾಪಾಡುತ್ತಿದ್ದನು.

ಒಂದೊಂದು ಸಮಯದಲ್ಲಿ ಹುಡುಗ ಹೊರಟುಹೋಗುವುದಾಗಿ ಹೇಳುತ್ತಿದ್ದನು. 'ಮಗು, ನಾನು ನಿನಗೆ ನನ್ನ ಸರ್ವಸ್ವವನ್ನೂ ಕೊಟ್ಟು ಬಿಡುವೆನು' ಎಂದು ಯಜ್ಞನಾಥ ಅವನಿಗೆ ಆಶೆ ತೋರಿಸುತ್ತಿದ್ದನು. ಹುಡುಗನ ವಯಸ್ಸು ಅಲ್ಪ. ಆದರೂ ಆ ಮಾತಿನ ಅರ್ಥವನ್ನು ಚೆನ್ನಾಗಿ ಅರಿತಿದ್ದನು.

ಗ್ರಾಮದ ಜನರು ಹುಡುಗನ ತಂದೆಯನ್ನು ಪತ್ತೆಮಾಡಲು ಯತ್ನಿಸಿದರು. 'ತಂದೆ ತಾಯಿಗಳ ಮನಸ್ಸಿಗೆ ಎಷ್ಟು ನೋವಾಗುತ್ತಿದೆಯೋ ಪಾಪ. ಈ ಹುಡುಗ ಮಹಾ ಪಾಪಿಷ್ಠ—'ಎಂದು ಎಲ್ಲರೂ ಹೇಳ ತೊಡಗಿದರು.

ಆಗಾಗ್ಗೆ ಹುಡುಗನನ್ನು ಉದ್ದೇಶಿಸಿ ಆಡಬಾರದ ಮಾತುಗಳಲ್ಲಿ ಬೈಯ್ಯುತ್ತಿದ್ದರು. ಅವರ ಈ ಅತ್ಯಾಚಾರವನ್ನು ಕಂಡರೆ ನ್ಯಾಯಬುದ್ಧಿಗಿಂತ ಸ್ವಾರ್ಥವೇ ಹೆಚ್ಚಾಗಿರುವುದೆಂದು ಚೆನ್ನಾಗಿ ವ್ಯಕ್ತವಾಗುತ್ತಿತ್ತು.

ದಾಮೋದರ ಪಾಲನೆಂಬುವನೊಬ್ಬನು ತಪ್ಪಿಸಿಕೊಂಡು ಹೋದ ತನ್ನ ಮಗನನ್ನು ಹುಡುಕುತ್ತಿರುವನೆಂಬ ಸುದ್ದಿ ದಾರಿಗನೊಬ್ಬನಿಂದ ಮುದುಕನಿಗೆ ತಿಳಿಯಿತು. ಅವನು ಈ ಗ್ರಾಮದ ಕಡೆಯೇ ಬರುತ್ತಿರುವನೆಂದೂ ಸುದ್ದಿ ಬಂದಿತು. ಈ ಸಮಾಚಾರದಿಂದ ನಿತಾಯಿ ಪಾಲನಿಗೆ ಮನಸ್ಸು ಚಂಚಲವಾಯಿತು. ಮುದುಕ ತೋರಿಸಿದ್ದ ಆಶೆಗಳಿಗೆ ಮರುಳಾಗದೆ ಓಡಿಹೋಗಲು ಯತ್ನಿಸಿದನು.

"ನಾನು ನಿನ್ನನ್ನು ಯಾರೂ ಕಂಡುಹಿಡಿಯದ ಜಾಗದಲ್ಲಿ ಬಚ್ಚಿಡುವೆನು. ಯಾರೂ ಕಂಡುಹಿಡಿಯಲಾರರು. ಈ ಊರಿನವರಿಗೂ ಸಾಧ್ಯವಿಲ್ಲ' ಎಂದು ಹೇಳಿ ಯಜ್ಞನಾಥನು ನಿತಾಯಿಯೊಡನೆ ಆಡಿಗಡಿಗೆ

